

بسم اللهِ الرّحمٰن الرّحيم

# ಪೈಗಂಬರ್ ಸಲ್ಲಲ್ಲಾಹು ಅಲೈಹಿವಸಲ್ಲಮರ ಮೇಲೆ ದುರೂದ್ (ಸ್ವಲಾತ್) ಹೇಳುವುದರ ಮಹತ್ವ ಹಾಗೂ ದುರೂದ್ ಹೇಳುವ ಸರಿಯಾದ ರೀತಿಯ ವಿವರಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **16-01-2015** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ)* ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ *ಈ ಕೆಳಗಿನ ಪವಿತ್ರ ಖುರ್‌ಆನ್ ವಚನಗಳನ್ನು ಪಠಿಸಿದರು:*

إِنَّ اللَّهَ وَمَلَائِكَتَهُ يُصَلُّونَ عَلَى النَّبِيِّ يَا أَيُّهَا الَّذِينَ آمَنُوا صَلُّوا عَلَيْهِ وَسَلِّمُوا تَسْلِيمًا

*ಇನ್ನಲ್ಲಾಹ ವ ಮಲಾಯಿಕತಹೂ ಯುಸಲ್ಲೂನ ಅಲನ್ನಬಿಯ್ಯಿ ಯಾ ಅಯ್ಯುಹಲ್ಲಝೀನ ಆಮನೂ ಸಲ್ಲೂ ಅಲೈಹಿ ವ ಸಲ್ಲಿಮೂ ತಸ್‌ಲೀಮಾ.*

**"ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ದೂತರು ಪ್ರವಾದಿಗೆ ಅನುಗ್ರಹಗಳನ್ನು ಬಯಸುತ್ತಾರೆ. ಎಲೈ ವಿಶ್ವಾಸಿಗಳೇ, ಅವರಿಗೆ ಅನುಗ್ರಹವೂ ಶಾಂತಿಯೂ ದೊರೆಯಲಿಕ್ಕೋಸ್ಕರ ನೀವು ಸಹ ಪ್ರಾರ್ಥಿಸಿರಿ."** (ಪವಿತ್ರ ಖುರ್‌ಆನ್ 33: 57)

ಪವಿತ್ರ ಖುರ್‌ಆನಿನ ಈ ವಚನದಿಂದ ತಿಳಿಯುವುದೇನೆಂದರೆ ಅಲ್ಲಾಹನು ತನ್ನ ಪ್ರವಾದಿಯ ಮೇಲೆ ಕಾರುಣ್ಯಗಳನ್ನು ಸುರಿಸುತ್ತಿದ್ದಾನೆ. ದೇವದೂತರು ಅವರಿಗೆ ಆಶೀರ್ವಾದ ಕೋರುತ್ತಿದ್ದಾರೆ ಮತ್ತು ಅವರಿಗೋಸ್ಕರ ಕಾರುಣ್ಯ ಕೋರುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಯಾರಾದರೂ ತಮ್ಮ ಕುತಂತ್ರಗಳ ಮೂಲಕ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅಭಿವೃದ್ಧಿಯನ್ನು ತಡೆಯಲು ಪ್ರಯತ್ನಿಸಿದರೆ ಅಥವಾ ಅದನ್ನು ಕಡಿಮೆ ಮಾಡಲು ಪ್ರಯತ್ನಿಸುವುದಾದರೆ ಅವರು ಎಂದೂ ಜಯಗಳಿಸಲಾರರು. ಅವರ ಪ್ರಯತ್ನಗಳು ಮತ್ತು ಗೂಢ ಕಾರಸ್ಥಾನಗಳು ಅಲ್ಲಾಹನ ಪ್ರಿಯ ಪ್ರವಾದಿಯಾದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಯಾವುದೇ ಹಾನಿಯನ್ನು ತಲಪಿಸಲಾರದು. ಯಾವ ಉದ್ದೇಶಕ್ಕೋಸ್ಕರ ಅಲ್ಲಾಹನು ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಕಳುಹಿಸಿರುವನೋ ಅದು ಅಲ್ಲಾಹನ ಅನುಗ್ರಹದಿಂದ ಈಡೇರುತ್ತಾ ಹೋಗುವುದು. ಈ ಕಾಲಘಟ್ಟದಲ್ಲಿ ಈ ಉದ್ದೇಶಗಳ ಸಾಫಲ್ಯಕ್ಕಾಗಿ ಅಲ್ಲಾಹನು ಅವರ ಸತ್ಯ ಸಂಧನಾದ ಪ್ರೇಮಿಯನ್ನು ಕಳುಹಿಸಿ ಇಸ್ಲಾಮಿನ ಸುಂದರ ಉಪದೇಶಗಳನ್ನು ಲೋಕದಾದ್ಯಂತ ಹರಡಲು ಹೊಸ ಬಾಗಿಲುಗಳನ್ನು ತೆರೆದಿರುವನು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶತ್ರುಗಳು ಹಿಂದೆ ಎಂದೂ ಜಯಶಾಲಿಗಳಾಗಲಿಲ್ಲ. ಈಗ ಸಹ ಅವರು ಜಯಶಾಲಿಗಳಾಗಲು ಸಾಧ್ಯವಿಲ್ಲ. ಇದು ಅಲ್ಲಾಹನ ತೀರ್ಮಾನವಾಗಿದೆ. ಆದುದರಿಂದ ಈ ಲೌಕಿಕ ಪ್ರಯತ್ನಗಳು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸ್ಥಾನಕ್ಕೆ ಮತ್ತು ಇಸ್ಲಾಮ್ ಧರ್ಮಕ್ಕೆ ಯಾವುದೇ ಹಾನಿಯನ್ನು ಉಂಟುಮಾಡಬಹುದೆಂದು ಒಬ್ಬ ನೈಜ ಮುಸ್ಲಿಮನಿಗೆ ಎಂದೂ ಚಿಂತೆ ಉಂಟಾಗಬಾರದು. ಅಲ್ಲಾಹನು ಒಬ್ಬ ನೈಜ ಮುಸ್ಲಿಮನಿಗೆ ನೀಡಿರುವ ಹೊಣೆಗಾರಿಕೆ ಏನೆಂದರೆ ಅಲ್ಲಾಹನ ಪ್ರಿಯ, ಪರಿಪೂರ್ಣ, ಆಖರೀ ನಬಿಯ ಮೇಲೆ ಅಸಂಖ್ಯಾತವಾಗಿ ದುರೂದ್ ಮತ್ತು ಸಲಾಮ್ ಅರ್ಪಿಸುತ್ತಾ ಇರಬೇಕು. ಇದು ವಾಸ್ತವಿಕವಾಗಿಯೂ ಸತ್ಯ ವಿಶ್ವಾಸಿಯಾಗಿರುವವನ ಕಡ್ಡಾಯ ಕರ್ತವ್ಯವಾಗಿದೆ. ಈ ಪ್ರವಾದಿಯ ಕೆಲಸವನ್ನು ಅಭಿವೃದ್ಧಿಗೊಳಿಸುತ್ತಾ ಹೋಗುವವರೊಂದಿಗೆ ಸೇರಿಕೊಂಡು ಅಲ್ಲಾಹನು ಮತ್ತು ದೇವದೂತರನ್ನು ಅನುಸರಿಸಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಸಂಖ್ಯಾತ ದುರೂದ್ ಮತ್ತು ಸಲಾಮ್ ಅರ್ಪಿಸುತ್ತಿರಬೇಕು.

ಕೆಲವು ದಿನಗಳ ಹಿಂದೆ ಫ್ರಾನ್ಸ್‌ನಲ್ಲಿ ಮುಸ್ಲಿಮರೆಂದು ಹೇಳಿಕೊಳ್ಳುವವರು ಒಂದು ಪತ್ರಿಕೆಯ ಕಚೇರಿಯನ್ನು ಆಕ್ರಮಿಸಿ ಹನ್ನೆರಡು ಜನರನ್ನು ಕೊಂದರು. ಇದರ ಬಗ್ಗೆ ನಾನು ಕಳೆದ ವಾರ ಜುಮುಅದಲ್ಲಿ ಸಂಕ್ಷಿಪ್ತವಾಗಿ ಪ್ರಸ್ತಾಪಿಸಿ ಅಹ್ಮದಿಯರು ನಬಿವರ್ಯರ ಮೇಲೆ ಸಲಾತ್ ಹೇಳುವ ಬಗ್ಗೆ ಗಮನ ಹರಿಸಿದ್ದೆನು. ಕೊಲೆ ಮತ್ತು ದಾಂಧಲೆ ಮೂಲಕ ಇಸ್ಲಾಮ್ ಜಯಿಸಲಾರದು. ನಾವು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ದುರೂದ್ ಪ್ರಾರ್ಥನೆ ಅರ್ಪಿಸುವ ಮೂಲಕ ನಮ್ಮ ಉದ್ದೇಶದಲ್ಲಿ ಜಯಗಳಿಸಬಹುದು ಎಂದು ಹೇಳಿದ್ದೆ. ಈ ಘಟನೆಯ ಕಾರಣದಿಂದ ತಪ್ಪು ಪ್ರತಿಕ್ರಿಯೆ ಉಂಟಾಗಬಹುದು ಎಂದು ಸಹ ನಾನು ಹೇಳಿದ್ದೆ. ಅವರಿಂದ ಅದನ್ನೇ ಪ್ರತೀಕ್ಷಿಸಬಹುದಾಗಿತ್ತು. ಅದೇ ರೀತಿ ಆ ಜನರು ತಪ್ಪಾದ ರೀತಿಯಲ್ಲಿ ಪ್ರತಿಕ್ರಿಯೆ ನೀಡಿದರು. ಅವರು ವ್ಯಂಗ್ಯ ಚಿತ್ರಗಳನ್ನು ಪುನಃ ಪ್ರಕಟಿಸಿದರು. ಆ ಕಾರಣದಿಂದ ನಮಗೆ ತುಂಬಾ ನೋವಾಯಿತು. ಪ್ರತಿಯೊಬ್ಬ ನೈಜ ಮುಸ್ಲಿಮರಿಗೆ ಹೀಗೆ ನೋವು ಉಂಟಾಗುವುದು ಸಹಜವೇ ಆಗಿದೆ. ನೋಡಿರಿ, ಈ ಭೀಕರ ಕೃತ್ಯದಿಂದ ಏನು ಪ್ರಯೋಜನ ದೊರಕಿತು.? ಇದರಿಂದಾಗಿ ಅನೇಕ ದೇಶಗಳಲ್ಲಿ ಇಸ್ಲಾಮ್ ಧರ್ಮ ತತ್ವಗಳ ಬಗ್ಗೆ ತಪ್ಪು ಕಲ್ಪನೆಗಳಿಗೆ ಪ್ರಚೋದನೆ ಉಂಟಾಯಿತು. ಸಾಯುತ್ತಿರುವ ಶತ್ರುವಿಗೆ ಜೀವ ನೀಡುವ ಕೆಲಸ ಸಹ ಆ ಭೀಕರಕೃತ್ಯದಿಂದ ಉಂಟಾಯಿತು. ಹಾ, ಇಸ್ಲಾಮಿನ ಹೆಸರಲ್ಲಿ ದೌರ್ಜನ್ಯ ಮಾಡುವ ಮುಸ್ಲಿಮ್ ಸಂಘಟನೆಗಳು ಇದನ್ನು ತಿಳಿದು ಕೊಂಡಿದ್ದರೆ ಎಷ್ಟು ಚೆನ್ನಾಗಿತ್ತು. ಇಸ್ಲಾಮಿನ ಪ್ರೀತಿಯ, ಸುಂದರ ಉಪದೇಶಗಳು ಮಾತ್ರವೇ ಲೋಕವನ್ನು ಶೀಘ್ರವಾಗಿ ಇಸ್ಲಾಮಿನೆಡೆಗೆ ತರಲು ಸಹಾಯಕವಾಗುತ್ತದೆ. ಅಲ್ಲಾಹನು ಹೇಳುವುದೇನೆಂದರೆ

ಶತ್ರುಗಳ ಇಂತಹ ಕೆಟ್ಟ ವರ್ತನೆಗಳ ಕಡೆಗೆ ಗಮನ ಹರಿಸುವುದರ ಬದಲಾಗಿ ಅದರಿಂದ ವಿಮುಖರಾಗಬೇಕು, ಅವರಿಂದ ದೂರವಿರಬೇಕು ಎಂದು. ಅವರ ಕೃತ್ಯದ ಪ್ರತಿಫಲವನ್ನು ಅಲ್ಲಾಹನಿಗೆ ಬಿಟ್ಟುಬಿಡಬೇಕು. ಅಲ್ಲಾಹನು ಹೇಳಿದ್ದಾನೆ– ಅವರು ನನ್ನ ಬಳಿಗೆ ಮರಳಿ ಬರುವಾಗ ಅವರು ತಮ್ಮ ದುಷ್ಕೃತ್ಯಗಳ ಫಲವನ್ನು ಅನುಭವಿಸುವರು.

ಈ ಪತ್ರಿಕೆಯನ್ನು ಮೊದಲು ಕೆಲವು ಬುದ್ಧಿಜೀವಿಗಳು ವಿರೋಧಿಸುತ್ತಿದ್ದರು. ಆದರೆ, ಈ ಘಟನೆಯ ನಂತರ ಅವರಲ್ಲಿ ಅನೇಕರು ಅಭಿಪ್ರಾಯ ಸ್ವಾತಂತ್ರ್ಯದ ಹೆಸರಿನಲ್ಲಿ ಅದಕ್ಕೆ ಬೆಂಬಲ ನೀಡಲು ತೊಡಗಿದ್ದಾರೆ. ಹೀಗಿದ್ದರೂ ನ್ಯಾಯ ನಿಷ್ಠರಾದವರು ಮತ್ತು ಬುದ್ಧಿಶಾಲಿಗಳಾದ ಕೆಲವು ಜನರು ಈ ಪತ್ರಿಕೆಯಲ್ಲಿ ಪ್ರಕಟವಾದ ವ್ಯಂಗ್ಯ ಚಿತ್ರದ ಬಗ್ಗೆ ಅತೃಪ್ತಿ ಸೂಚಿಸುತ್ತಾ ಈ ಘಟನೆಗೆ ಪತ್ರಿಕೆಯ ನಿರ್ವಾಹಕ ಮಂಡಳಿಯೇ ಹೊಣೆಯಾಗಿದೆ ಎಂದು ಹೇಳುತ್ತಿದ್ದಾರೆ. ಉದಾಹರಣೆಗೆ 'ಚಾರ್ಲಿ ಹೆಬ್ಡೋ' ಎಂಬ ಹೆಸರಿನ ಈ ಪತ್ರಿಕೆಯ ಸ್ಥಾಪಕ ಸದಸ್ಯರಲ್ಲೊಬ್ಬರಾದ ಹೆನ್ರಿ ರಸೆಲ್ ಎಂಬವರು ಹೇಳಿದರು: ಈ ಪತ್ರಿಕೆ ತಯಾರಿಸಿದ ವ್ಯಂಗ್ಯ ಚಿತ್ರವು ರೊಚ್ಚಿಗೆಬ್ಬಿಸುವುದಾಗಿತ್ತು. ಇದೇ ಕಾರಣದಿಂದ ಈ ಪತ್ರಿಕೆಯ ಸಂಪಾದಕರು ತನ್ನೊಂದಿಗೆ ತನ್ನ ಸಹಾಯಕರನ್ನು ಸಹ ಮೃತ್ಯುವಿನ ಮುಖಕ್ಕೆ ತಳ್ಳಿದರು. ಇಂತಹ ವ್ಯಂಗ್ಯ ಚಿತ್ರಗಳು ನಮ್ಮ ಮೂಲ ಧೋರಣೆಗಳಿಗೆ ವಿರುದ್ಧವಾಗಿದೆ ಎಂದು ಸಹ ಅವರು ಹೇಳಿದರು.

ಅದೇ ರೀತಿ ಪೋಪರು ಸಹ ಬಹಳ ಉತ್ತಮವಾದ ಹೇಳಿಕೆ ನೀಡಿದರು: ಅಭಿಪ್ರಾಯ ಸ್ವಾತಂತ್ರ್ಯ ಎಂದರೆ ಅನಿರ್ಬಂಧಿತ ಸ್ವಾತಂತ್ರ್ಯವಲ್ಲ ಎಂದು ಅವರು ಹೇಳಿದರು. ಪ್ರತಿಯೊಂದು ಧರ್ಮಕ್ಕೂ ಒಂದು ಪ್ರತಿಷ್ಠೆ ಇರುತ್ತದೆ ಅದನ್ನು ಗೌರವಿಸಬೇಕಾದುದು ಆವಶ್ಯಕವೆಂದೂ ಅವರು ಹೇಳಿದರು. ಯಾವುದೇ ಧರ್ಮದ ಗೌರವವನ್ನು ಆಕ್ರಮಿಸಬಾರದೆಂದು ಸಹ ಅವರು ಹೇಳಿದರು. ಅವರು ಹೇಳಿದರು– "ನೋಡಿರಿ, ನನ್ನ ನಿಕಟ ಸ್ನೇಹಿತನೊಬ್ಬ ನನ್ನ ತಾಯಿಯನ್ನು ಬೈದರೆ, ಆಗ ನನ್ನ ಪ್ರತಿಕ್ರಿಯೆ, ಅವನ ಮುಖಕ್ಕೆ ಹೊಡೆಯುವುದಲ್ಲದೆ ಮತ್ತೇನು.. ಅವನು ಅಂತಹ ಪ್ರತಿಕ್ರಿಯೆಯನ್ನು ಪ್ರತೀಕ್ಷಿಸಬೇಕಾಗಿದೆ. ಯಾರದಾದರೂ ಭಾವನೆಗಳನ್ನು ಕೆಣಕುವುದು ತಪ್ಪಾಗಿದೆ. ಅವರು ಭಾವನೆಗಳನ್ನು ಉದ್ರೇಕಿಸಿದರು. ಆದುದರಿಂದ ತಪ್ಪು ಅವರದೇ ಆಗಿದೆ."

ಪೋಪರು ಬಹಳ ವಸ್ತುನಿಷ್ಠವಾದ ಹೇಳಿಕೆ ನೀಡಿದ್ದಾರೆ. ಇಂದಿನ ಕಾಲದಲ್ಲಿ ಸಂಪರ್ಕ ಮಾಧ್ಯಮಗಳು ಲೋಕದ ಮೇಲೆ ಆವರಿಸಿರುತ್ತದೆ. ಅಗ್ನಿ ಹೊತ್ತಿಸಲು, ಅಗ್ನಿ ನಂದಿಸಲು, ಗಲಬೆ ಗೊಂದಲ ಉಂಟು ಮಾಡಲು, ಗಲಬೆಗೊಂದಲ ತಡೆಯಲು ಅವು ಬಹಳ ಕಾರ್ಯಕ್ಷಮತೆ ಹೊಂದಿವೆ.

ಈ ಸಾರಿ ಪ್ರಥಮ ಬಾರಿ ಯು.ಕೆ. ಮತ್ತು ಲೋಕದ ವಿವಿಧ ಸಂಪರ್ಕ ಮಾಧ್ಯಮಗಳು ಈ ಘಟನೆ ಬಗ್ಗೆ ನಮ್ಮ ಜಮಾಅತಿನ ಪ್ರತಿಕ್ರಿಯೆ ಕೇಳಿದೆ. ನಾವು ಈ ಘಟನೆಯ ಬಗ್ಗೆ ಹೇಳಿದೆವು– "ಇದು ಅನಿಸ್ಲಾಮಿಕ ಕೃತ್ಯವಾಗಿದೆ. ನಾವು ಇದರ ಬಗ್ಗೆ ದುಃಖ ಸೂಚಿಸುತ್ತೇವೆ. ಆದರೆ ಅಭಿಪ್ರಾಯ ಸ್ವಾತಂತ್ರ್ಯಕ್ಕೂ ಕೆಲವು ಪರಿಮಿತಿಗಳಿವೆ. ಪರಿಮಿತಿಗಳನ್ನು ಪಾಲಿಸದಿದ್ದರೆ ಉಂಟಾಗುವ ಅನಾಹುತಗಳಿಗೆ ಈ ಜನರೇ ಜವಾಬ್ದಾರರಾಗುತ್ತಾರೆ. ಅವರು ಜನರ ಭಾವನೆಗಳನ್ನು ಉದ್ರೇಕಿಸುತ್ತಾರೆ." ಇದಲ್ಲದೆ, ಸವಿಸ್ತಾರವಾದ ನಮ್ಮ ಹೇಳಿಕೆಗಳು ಪತ್ರಿಕೆಗಳಲ್ಲೂ ಇತರ ವಾರ್ತಾ ಮಾಧ್ಯಮಗಳಲ್ಲೂ ಪ್ರಕಟವಾಗಿವೆ. ಯು.ಕೆ ಯಲ್ಲಿ ಸ್ಕೈ ನ್ಯೂಸ್, ನ್ಯೂಸ್ ಫೈವ್, ಬಿ.ಬಿ.ಸಿ ರೇಡಿಯೋ, ಎಲ್‌ಬಿಸಿ, ಬಿಬಿಸಿ ಲೀಡ್ಜ್, ಲಂಡನ್ ಲೈವ್ ಇವುಗಳಲ್ಲಿ ಮತ್ತು ವಿದೇಶದ ಫಾಕ್ಸ್ ಟಿ.ವಿ, ಸಿಎನ್‌ಎನ್, ಮತ್ತು ಕೆನಡದ ಪತ್ರಿಕೆಗಳಲ್ಲಿ ಹಾಗೂ ಗ್ರೀಸ್, ಐಯರ್‌ಲೇಂಡ್, ಫ್ರಾನ್ಸ್, ಅಮೇರಿಕದ ವಿವಿಧ ಪತ್ರಿಕೆಗಳಲ್ಲಿ ನಮ್ಮ ಹೇಳಿಕೆ ಪ್ರಕಟವಾಗಿದೆ. ಆ ಮೂಲಕ ಅನೇಕ ಬಿಲಿಯನ್ ಜನರಿಗೆ ಇಸ್ಲಾಮಿನ ವಾಸ್ತವಿಕ ತತ್ವಗಳು ತಲಪಿದುವು. ಇಸ್ಲಾಮ್ ಧರ್ಮದ ಸರಿಯಾದ ರೂಪವನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯ ಸಂಧನಾದ ಪ್ರೇಮಿಯ ಜಮಾಅತ್ ಮೂಲಕವೇ ಲೋಕಕ್ಕೆ ತಿಳಿಸಿಕೊಡಬೇಕೆಂಬುದು ಅಲ್ಲಾಹನ ವಿಧಿನಿರ್ಣಯವಾಗಿದೆ. ಈ ಸಂದರ್ಭದಲ್ಲಿ ನಮ್ಮ ಹೊಣೆಗಾರಿಕೆ ಏನೆಂದರೆ ನಾವು ನಮ್ಮ ವಲಯದಲ್ಲಿ ಲೋಕಕ್ಕೆ ಸಂದೇಶ ನೀಡಬೇಕು– ತಪ್ಪು ಪ್ರತಿಕ್ರಿಯೆಯಿಂದ ಗಲಬೆಗೊಂದಲಗಳು ಸೃಷ್ಟಿಸಲ್ಪಡುತ್ತವೆ ಹೊರತು ಅದರಿಂದ ಬೇರೆ ಯಾವ ಪ್ರಯೋಜನವೂ ಇಲ್ಲ ಎಂಬುದನ್ನು ನಾವು ತಿಳಿಸಿಕೊಡಬೇಕಾಗಿದೆ. ಇಂದಿನ ಸ್ಥಿತಿಯನ್ನು ಮತ್ತೆ ಉದ್ರೇಕಿಸುವುದರಿಂದ ಹೆಚ್ಚು ಕೆಟ್ಟ ಪರಿಣಾಮ ಉಂಟಾಗುವುದು. ಲೋಕದಲ್ಲಿ ನಾಲ್ಕು ದಿಕ್ಕುಗಳಿಂದಲೂ ಬೆಂಕಿ ಹಬ್ಬುವುದು. ಲೋಕ ಅದನ್ನು ತಾಳಿಕೊಳ್ಳುವ ಶಕ್ತಿ ಹೊಂದಿಲ್ಲ. ಆದುದರಿಂದ ತಪ್ಪು ಕೆಲಸಗಳಿಂದ ಜನರನ್ನು ಉದ್ರೇಕಿಸಬಾರದು. ಅಲ್ಲಾಹನ ಹಿಡಿತಕ್ಕೆ ಒಳಗಾಗುವಂತಹ ಕೆಲಸಗಳನ್ನು ಮಾಡಲು ಜನರಿಗೆ ಪ್ರಚೋದನೆ ನೀಡಬೇಡಿರಿ ಎಂದೂ ನಾವು ಲೋಕಕ್ಕೆ ತಿಳಿಸಿಕೊಡಬೇಕಾಗಿದೆ. ಲೋಕದ ಜನರಿಗೆ ಇದನ್ನು ಗ್ರಹಿಸುವ ಬುದ್ಧಿಯನ್ನು ಅಲ್ಲಾಹನು ದಯಪಾಲಿಸಲಿ.

ಇದರೊಂದಿಗೆ ಅಹ್ಮದಿಯರ ಬಹಳ ದೊಡ್ಡ ಹೊಣೆಗಾರಿಕೆ ಏನೆಂದರೆ ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಆದೇಶ ನೀಡಿರುವಂತೆ, ನಾವು ಯಾವಾಗಲೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ದುರೂದ್ ಮತ್ತು ಸಲಾಮ್ ಅರ್ಪಿಸುತ್ತಾ ಇರಬೇಕು. ಈಗ ನಾನು ಇದಕ್ಕೆ ಸಂಬಂಧಿಸಿ ಕೆಲವು ಹದೀಸುಗಳನ್ನು ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಉಲ್ಲೇಖಗಳನ್ನು ನಿಮ್ಮ ಮುಂದಿರಿಸುತ್ತೇನೆ.

ಹಝ್ರತ್ ಅಬ್ದುಲ್ಲಾ ಬಿನ್ ಮಸ್‌ಊದ್(ರ) ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಖಿಯಾಮತ್ ದಿನದಂದು ಜನರ ಪೈಕಿ ನನಗೆ ಹೆಚ್ಚು ಸಮೀಪವಾಗಿರುವವರು ನನ್ನ ಮೇಲೆ ಅತ್ಯಧಿಕ ದುರೂದ್ ದುಆ ಮಾಡಿದವರಾಗಿರುವರು. ಆದುದರಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು

ಅಲೈಹಿ ವಸಲ್ಲಮರ ಬಗ್ಗೆ ವಾಸ್ತವಿಕ ಪ್ರೀತಿಯ ಪ್ರಕಟಣೆ ಮಾಡುವುದು ದುರೂದ್ ಪ್ರಾರ್ಥನೆ ಮಾಡುವ ಮೂಲಕವಾಗಿದೆ. ಅದರಿಂದ ಅವರ ಸಾಮೀಪ್ಯ ಲಭಿಸುವುದು.

ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಖಿಯಾಮತ್ ದಿನದ ಅಪಾಯಗಳಿಂದಲೂ ಭಯಾನಕ ಸಂದರ್ಭಗಳಿಂದಲೂ ಸಂರಕ್ಷಿಸಲ್ಪಡುವವನು ಲೋಕದಲ್ಲಿ ನನ್ನ ಮೇಲೆ ಎಲ್ಲರಿಗಿಂತ ಹೆಚ್ಚಾಗಿ ದುರೂದ್ ಅರ್ಪಿಸಿದವನಾಗಿದ್ದಾನೆ. ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: "ನನಗೆ ಅಲ್ಲಾಹನ ಮತ್ತು ದೇವದೂತರ ದುರೂದ್‌ಗಳೇ ಸಾಕಾಗಿದ್ದುವು. ಆದರೆ ಸತ್ಯವಿಶ್ವಾಸಿಗಳಿಗೆ ಪುಣ್ಯ ಗಳಿಸಲು ಆ ಮೂಲಕ ಒಂದು ಸಂದರ್ಭ ನೀಡಲಾಗಿದೆ."

ದುಆ ಮಾಡುವ ಸರಿಯಾದ ರೀತಿಯ ಬಗ್ಗೆ ಒಂದು ಹದೀಸ್ ಹೀಗಿದೆ: ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ನಮಾಝ್‌ನಲ್ಲಿ ಕುಳಿತಿರುವಾಗ ಅಲ್ಲಾಹನನ್ನು ಸ್ತುತಿಸಿ ನನ್ನ ಮೇಲೆ ದುರೂದ್ ಅರ್ಪಿಸಿ ಅನಂತರ ದುಆ ಮಾಡಿದರೆ ಆ ದುಆ ಅಂಗೀಕರಿಸಲ್ಪಡುವುದು.

ಹಝ್ರತ್ ಅಬ್ದುಲ್ಲಾ ಬಿನ್ ಅಮ್ರ್ ಬಿನ್ ಆಸ್(ರ) ವರದಿ ಮಾಡುತ್ತಾರೆ: ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅಝಾನ್ ಕೇಳುವಾಗ ಅಝಾನ್ ಪದಗಳನ್ನು ಪುನರಾವರ್ತಿಸಿರಿ. ಅನಂತರ ನನಗೆ ದುರೂದ್ ಪ್ರಾರ್ಥನೆ ಮಾಡಿರಿ. ಹಾಗೆ ದುರೂದ್ ಅರ್ಪಿಸುವವನಿಗೆ ಅಲ್ಲಾಹನು ಹತ್ತು ಪಟ್ಟು ಅನುಗ್ರಹ ನೀಡುವನು. ನನಗೋಸ್ಕರ ಅಲ್ಲಾಹನಿಂದ "ವಸೀಲ" ಬೇಡಿಕೊಳ್ಳಿರಿ. ಅಂತಹ ವ್ಯಕ್ತಿಗೆ ನನ್ನ ಶಿಫಾರಸು ಧರ್ಮಬದ್ಧವಾಗುವುದು.

ಹಝ್ರತ್ ಉಮರ್(ರ) ಹೀಗೆ ಹೇಳಿದರು: "ದುಆ ಆಕಾಶ ಮತ್ತು ಭೂಮಿಯ ಮಧ್ಯೆ ತೂಗಿ ನಿಲ್ಲುತ್ತದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ದುರೂದ್ ಪ್ರಾರ್ಥನೆ ಮಾಡುವವರೆಗೂ ಅದು ಅಲ್ಲಾಹನ ಬಳಿಗೆ ಏರಿ ಹೋಗುವುದಿಲ್ಲ."

ದುರೂದ್ ಯಾವರೀತಿ ಹೇಳಬೇಕು ಎಂದು ವಿವರಿಸುತ್ತ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಒಬ್ಬ ಶಿಷ್ಯರಿಗೆ ಹೀಗೆ ಬರೆದಿದ್ದಾರೆ: "ನೀವು ದುರೂದ್ ಶರೀಫ್(ಸಲಾತ್) ಹೇಳುವಾಗ ಬಹಳ ಶ್ರದ್ಧೆ ನೀಡಿರಿ. ನೀವು ನಿಮ್ಮ ಪ್ರೀತಿಗೆ ಪಾತ್ರರಾದವರಿಗೆ ಪ್ರಾಮಾಣಿಕವಾಗಿ ಅನುಗ್ರಹ ಆಶಿಸುವ ಹಾಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ನಿಷ್ಠೆಯಿಂದ ಅನುಗ್ರಹ ಆಶಿಸಿರಿ. ಬಹಳ ಹೃತ್ಪೂರ್ವಕವಾಗಿ ಪ್ರಾರ್ಥಿಸಿರಿ. ನೀವು ನಟನೆಯ ರೂಪದಲ್ಲಿ ಅಲ್ಲ, ವಾಸ್ತವಿಕವಾಗಿ ಪ್ರೀತಿ ಹೊಂದಿ ಸತ್ಯವಾಗಿಯೂ ಅವರಿಗೋಸ್ಕರ ಪ್ರಾರ್ಥಿಸಿರಿ. ಈ ಪ್ರಾರ್ಥನೆ ಮಾಡುವುದರಿಂದ ನೀವು ಬಳಲಿ ಹೋಗಬಾರದು. ಅಲ್ಲಾಹನ ಅನುಗ್ರಹಗಳು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಸುರಿಯಲಿ ಎಂದು ನೀವು ಹೃತ್ಪೂರ್ವಕವಾಗಿ ಪ್ರಾರ್ಥಿಸಿರಿ."

ದುರೂದ್ ಪ್ರಾರ್ಥನೆಯ ಉದ್ದೇಶದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: "ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಅಪರಿಮಿತ ಅನುಗ್ರಹ ನೀಡಿರುತ್ತಾನೆ. ಆದುದರಿಂದ ಅವರಿಗೆ ಅನುಗ್ರಹ ಆಶಿಸುವವನಿಗೆ ಸಹ ಅವನ ಪ್ರಾರ್ಥನೆಗೆ ಅನುಸಾರವಾಗಿ ಅದರಿಂದ ಪಾಲು ಸಿಗುತ್ತದೆ."

ದುರೂದ್ ಶರೀಫ್ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇನ್ನೊಂದು ಕಡೆ ಹೇಳುತ್ತಾರೆ: "ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಕರ್ಮಗಳು ಅಲ್ಲಾಹನಿಗೆ ಎಷ್ಟು ಪ್ರಿಯಕರವಾಯಿತು ಎಂದರೆ ಜನರು ಕೃತಜ್ಞತೆ ಅರ್ಪಿಸಲು ಯಾವಾಗಲೂ ದುರೂದ್ ಪ್ರಾರ್ಥನೆ ಮಾಡಬೇಕು ಎಂದು ಅಲ್ಲಾಹನು ಬಯಸಿದನು."

"ದುರೂದ್ ಪ್ರಾರ್ಥನೆ ವಿಶ್ವಾಸದಲ್ಲಿ ಸ್ಥಿರತೆ ಕಾಪಾಡಲು ಪ್ರಮುಖ ಮಾರ್ಗವಾಗಿದೆ. ದುರೂದ್ ಪ್ರಾರ್ಥನೆಯನ್ನು ಒಂದು ಆಚಾರ ರೂಪದಲ್ಲಿ ಮಾಡಬೇಡಿರಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸೌಂದರ್ಯವನ್ನೂ ಉಪಕಾರವನ್ನೂ ದೃಷ್ಟಿಯಲ್ಲಿಟ್ಟು ಪ್ರಾರ್ಥನೆ ಮಾಡಿರಿ. ಇದರ ಫಲವಾಗಿ ನಿಮ್ಮ ಪ್ರಾರ್ಥನೆಗಳು ಅಂಗೀಕರಿಸಲ್ಪಡುವುವು."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೂ ಹೇಳುತ್ತಾರೆ: "ಈಕಾಲದಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಗೌರವವನ್ನು ಪ್ರಕಟಿಸಲು ಅಲ್ಲಾಹನು ಈ ಜಮಾಅತನ್ನು ಸ್ಥಾಪಿಸುವಂತೆ ಮಾಡಿದನು. ಇಸ್ಲಾಮಿನ ಬಗ್ಗೆ ಹೃದಯದಲ್ಲಿ ನೋವನ್ನು ಹೊಂದಿದವರೊಂದಿಗೆ ನಾನು ಕೇಳಲು ಬಯಸುತ್ತೇನೆ– ಅಲ್ಲಾಹನಿಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗೌರವದ ಬಗ್ಗೆ ಏನೂ ಕಾಳಜಿ ಇರಲಿಲ್ಲವೇ? ಬೈಗಳು, ನಿಂದನೆಗಳು ಮಾಡಲ್ಪಡುವ ಈ ಕಾಲದಲ್ಲಿ ಒಂದು ದೈವಿಕ ಸಂಘಟನೆ ರೂಪಿಸಬೇಕೆಂದು ಅವನು ನಿರ್ಧರಿಸಲಿಲ್ಲವೇ? ಶತ್ರುಗಳ ಬಾಯಿಮುಚ್ಚಿಸಿ ಪ್ರವಾದಿವರ್ಯರ ಪರಿಶುದ್ಧತೆಯನ್ನು ಲೋಕದಲ್ಲಿ ಪ್ರಚಾರ ಮಾಡುವ ಆವಶ್ಯಕತೆ ಇಲ್ಲವೇ? ಅಲ್ಲಾಹನು ದೇವದೂತರು ಅವರಿಗೆ ದುರೂದ್ ಅರ್ಪಿಸುತ್ತಿರುವಾಗ ಅವರನ್ನು ಅಪಮಾನಿಸುವ ಈ ಕಾಲದಲ್ಲಿ ಅವರಿಗೆ ದುರೂದ್ ಅರ್ಪಿಸುವುದು ಎಷ್ಟು ಆವಶ್ಯಕವಾಗಿದೆ?"

ಒಟ್ಟಿನಲ್ಲಿ ದುರೂದ್ ಪ್ರಾರ್ಥನೆ ಹೆಚ್ಚು ಹೆಚ್ಚಾಗಿ ಮಾಡಬೇಕಾದುದು ಇಂದು ಪ್ರತಿಯೊಬ್ಬ ಅಹ್ಮದಿಗೆ ಆವಶ್ಯಕವಾಗಿದೆ. ಹಾಗೆ ಮಾಡಿದರೆ ಮಾತ್ರವೇ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ

ಉದ್ದೇಶವನ್ನು ನಾವು ಈಡೇರಿಸುವವರಾಗುವೆವು. ನಾವು ಅಲ್ಲಾಹನ ಆಜ್ಞೆಗಳಿಗೆ ಓಗೊಡುವವರೂ ನಮ್ಮ ಪ್ರೀತಿಯ ವಾದವನ್ನು ಈಡೇರಿಸುವವರೂ ಆಗುವೆವು. ಇಂದು ಪ್ರತಿಯೊಬ್ಬ ಅಹ್ಮದಿ ಕೋಟ್ಯಾನುಕೋಟಿ ದುರೂದ್ ಮತ್ತು ಸಲಾಮನ್ನು ತನ್ನ ಹೃದಯದ ನೋವಿನೊಂದಿಗೆ ಸೇರಿಸಿ ಅಲ್ಲಾಹನ ಅರ್ಶ್‌ಗೆ ತಲಪಿಸಲಿ. ಈ ನೋವುಭರಿತ ಪ್ರಾರ್ಥನೆಯು ಇವರ ಬಂದೂಕುಗಳ ಗುಂಡುಗಳಿಗಿಂತ ಹೆಚ್ಚಾಗಿ ಶತ್ರುಗಳ ನಾಶವನ್ನು ಮಾಡುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನೀವು ಇತರರಂತೆ ದುರೂದ್ ಶರೀಫನ್ನು ಗಿಳಿಯ ಹಾಗೆ ಪಠಿಸಬಾರದು. ಈ ದುಆ ಮಾಡುವುದರಿಂದ ನನಗೆ ಏನಾದರೂ ಪ್ರಯೋಜನ ಸಿಗಬಹುದು ಎಂಬ ಉದ್ದೇಶದಿಂದಲೂ ದುರೂದ್ ಓದಬಾರದು. ಎಲ್ಲ ಅನುಗ್ರಹಗಳು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೇಲೆ ಸುರಿಸಲ್ಪಡಲಿ ಎಂಬ ಉದ್ದೇಶದಿಂದ ಪ್ರಾರ್ಥಿಸಬೇಕು. ಅವರ ತೇಜಸ್ಸು ಇಹಲೋಕದಲ್ಲೂ ಪರಲೋಕದಲ್ಲೂ ಹೊಳೆಯಲಿ ಎಂದು ಪ್ರಾರ್ಥಿಸಬೇಕು. ಇದಕ್ಕಿಂತ ಹೆಚ್ಚಿನ ಉದ್ದೇಶವಿರಬಾರದು. ಸ್ಥಿರವಾಗಿ ದುಆ ಮಾಡುತ್ತಾ ಇರಬೇಕು. ಈರೀತಿ ದುರೂದ್ ಓದಿದರೆ ಅದರ ಅದ್ಭುತ ಪ್ರಭಾವ ಬೇರೆಯೇ ಆಗುವುದು."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ– "ಸಲಾತ್ ಹೇಳುವ ಅತ್ಯುತ್ತಮವಾದ ರೀತಿಯು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕಲಿಸಿಕೊಟ್ಟ ರೀತಿಯೇ ಆಗಿದೆ. ಅದೆಂದರೆ–

اللّٰهُمَّ صَلِّ عَلٰى مُحَمَّدٍ، وَعَلٰى آلِ مُحَمَّدٍ، كَمَا صَلَّيْتَ عَلٰى
إِبْرَاهِيمَ وَعَلٰى آلِ إِبْرَاهِيمَ، إِنَّكَ حَمِيدٌ مَجِيدٌ
اللّٰهُمَّ بَارِكْ عَلٰى مُحَمَّدٍ، وَعَلٰى آلِ مُحَمَّدٍ، كَمَا بَارَكْتَ عَلٰى
إِبْرَاهِيمَ وَعَلٰى آلِ إِبْرَاهِيمَ، إِنَّكَ حَمِيدٌ مَجِيدٌ

**"ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಸಲ್ಲೈತ ಅಲಾ ಇಬ್ರಾಹೀಮ ವ ಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುನ್ ಮಜೀದ್. ಅಲ್ಲಾಹುಮ್ಮ ಬಾರಿಕ್ ಅಲಾ ಮುಹಮ್ಮದಿನ್ ವ ಅಲಾ ಆಲಿ ಮುಹಮ್ಮದಿನ್ ಕಮಾ ಬಾರಕ್ತ ಅಲಾ ಇಬ್ರಾಹೀಮ ವ ಅಲಾ ಆಲಿ ಇಬ್ರಾಹೀಮ ಇನ್ನಕ ಹಮೀದುನ್ ಮಜೀದ್"**

"ಒಬ್ಬ ಸಾತ್ವಿಕನ ಬಾಯಿಯಿಂದ ಹೊರಡುವ ಮಾತುಗಳು ಅನುಗ್ರಹಭರಿತವಾಗಿರುತ್ತವೆ. ಹೀಗಿರುವಾಗ ಸಾತ್ವಿಕರ ಸರದಾರ, ಪ್ರವಾದಿಗಳ ನಾಯಕರ ಬಾಯಿಯಿಂದ ಹೊರಟ ಈ ಶಬ್ದಗಳು ಎಷ್ಟು ಅನುಗ್ರಹಪೂರ್ಣ ವಾಗಿರುವುದು."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ದುರೂದ್ ಶರೀಫ್ ಲೆಕ್ಕ ಹಾಕಿ ಓದಬೇಕಾಗಿಲ್ಲ. ಹೃತ್ಪೂರ್ವಕವಾಗಿ, ಪ್ರಜ್ಞೆಯಿಂದ ಅದನ್ನು ಓದಬೇಕು. ಹೃದಯದಲ್ಲಿ ಒಂದು ನವೋತ್ಸಾಹ ತಲೆದೋರುವ ತನಕ ಸಲಾತ್ ಪ್ರಾರ್ಥನೆ ಹೇಳಬೇಕು."

ಅಲ್ಲಾಹನು ನಮ್ಮೆಲ್ಲರಲ್ಲೂ ಇಂತಹ ಸ್ಥಿತಿಯನ್ನು ಉಂಟುಮಾಡಲಿ. ಇಂತಹ ಜನರ ಸಂಖ್ಯೆ ವರ್ಧಿಸುತ್ತಾ ಹೋದರೆ ಅದರ ಲಾಭ ಜಮಾಅತಿಗೆ ಸಿಗುವುದು. ಜಮಾಅತ್ ಅಭಿವೃದ್ಧಿ ಹೊಂದುತ್ತಾ ಹೋಗುವುದು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ದುರೂದ್ ಪ್ರಾರ್ಥನೆಯ ಒಂದು ವಿಧಾನ ನನಗೆ ಬಹಳ ಉತ್ತಮವಾಗಿ ತೋರುತ್ತದೆ. ನಮ್ಮಲ್ಲಿ ಕೆಲವರು ಆ ರೀತಿಗೆ ಸಮೀಪವಾಗಿ ಪ್ರಾರ್ಥಿಸುತ್ತಾ ಇರಬಹುದು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರದು ಎಂತಹ ರೀತಿ ಎಂದರೆ ಅದರಿಂದ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆ ವೈಯಕ್ತಿಕ ಪ್ರೀತಿಯಲ್ಲಿ ಒಂದು ಹೊಸ ರೂಪ ಉಂಟಾಗಬಹುದು. ಆಮಾಅತಿನ ಅಭಿವೃದ್ಧಿಗೆ ದುಆ ಮಾಡಬೇಕೆಂಬ ಆಸಕ್ತಿಯೂ ಉಂಟಾಗುವುದು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: "ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗೋರಿಯ ಸಮೀಪ ಪ್ರಾರ್ಥಿಸಲು ಹೋಗುವಾಗಲೆಲ್ಲಾ ನಾನು ಈರೀತಿ ದುಆ ಮಾಡುತ್ತೇನೆ. ಮೊದಲು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೋಸ್ಕರ ಪ್ರಾರ್ಥನೆ ಮಾಡುತ್ತೇನೆ. ಅನಂತರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೋಸ್ಕರ ಪ್ರಾರ್ಥಿಸುತ್ತೇನೆ. ಅನಂತರ ಹೀಗೆ ಪ್ರಾರ್ಥಿಸುತ್ತೇನೆ: ಓ ಅಲ್ಲಾಹ್ ಈ ಹಿರಿಯರಿಗೆ ಪಾರಿತೋಷಿಕವಾಗಿ ನೀಡಲು ಯೋಗ್ಯವಾದ ಯಾವ ವಸ್ತುವೂ ನನ್ನ ಬಳಿ ಇಲ್ಲ. ನನ್ನ ಬಳಿ ಈಗ ಇರುವ ವಸ್ತುಗಳಿಂದ ಅವರಿಗೆ ಯಾವ ಲಾಭವನ್ನೂ ತಲಪಿಸಲು ಸಾಧ್ಯವಿಲ್ಲ. ಆದರೆ ನಿನ್ನ ಬಳಿ ಎಲ್ಲವೂ ಇವೆ. ಆದುದರಿಂದ ಓ ಅಲ್ಲಾಹ್, ನಾನು ನಿನ್ನನ್ನು ಬೇಡಿಕೊಳ್ಳುತ್ತೇನೆ. ನೀನು ನನಗೆ ಉಪಕಾರ ಮಾಡು. ಅವರಿಗೆ ಸ್ವರ್ಗದಲ್ಲಿ ಇಷ್ಟರವರೆಗೆ ಲಭಿಸದೆ ಇದ್ದ ಒಂದು ವಸ್ತುವನ್ನು ನೀನು ನನ್ನ ಪರವಾಗಿ ಅವರಿಗೆ ಪಾರಿತೋಷಿಕವಾಗಿ ನೀಡು."

ಆದುದರಿಂದ ನಾವೆಲ್ಲರೂ "ಓ ಅಲ್ಲಾಹ್ ನೀನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಹಿಂದೆಂದೂ ಲಭಿಸಿರದಂತಹ ಪಾರಿತೋಷಿಕಗಳನ್ನು ನಮ್ಮ ಪರವಾಗಿ ಕೊಡು" ಎಂದು ಪ್ರಾರ್ಥಿಸಿದರೆ ನಮ್ಮ ಪ್ರಾರ್ಥನೆ ಅಂಗೀಕರಿಸಿ ಅಂತಹ ಪಾರಿತೋಷಿಕಗಳನ್ನು ಅಲ್ಲಾಹನು ಅವರಿಗೆ ಕೊಡುವಾಗ ಈ ಪಾರಿತೋಷಿಕ ಇಂತಹ ಜನರಿಂದ ಎಂದು ತಿಳಿಸುವನು. ಆಗ ಅವರ ಆತ್ಮ ಅಲ್ಲಾಹನ ಸನ್ನಿಧಿಯಲ್ಲಿ ಸಾಷ್ಟಾಂಗ ಪ್ರಣಾಮ ಮಾಡಿ ಹೇಳುವುದು: ಓ ಅಲ್ಲಾಹ್, ನೀನು ನಮ್ಮ ಕಡೆಯಿಂದ ಅವರಿಗೆ ಸಹ ಉತ್ತಮ ಪ್ರತಿಫಲ ನೀಡು ಎಂದು.

ಈ ರೀತಿ **'ಫ ಹಯ್ಯೂಬಿ ಅಹ್‌ಸನಿ ಮಿನ್‌ಹಾ'** (ಅದಕ್ಕಿಂತ ಉತ್ತಮ ಹಾರೈಕೆ ನೀಡಿರಿ) ಎಂಬ ಪವಿತ್ರ ಖುರ್‌ಆನ್‌ನ ವಚನದ ಪ್ರಕಾರ ದುಆ ಮಾಡುವವನಿಗೆ

ದುರೂದ್ ದುಆದ ಪ್ರತಿಫಲ ತಿರುಗಿ ಲಭಿಸುವುದು. ಹಾಗೂ ದುರೂದ್ ಮಾಡುವವರ ಆಧ್ಯಾತ್ಮಿಕ ಪದವಿ ಉನ್ನತಗೊಳ್ಳುವುದು.

ಇದೇ ಸರಿಯಾದ ರೀತಿಯಾಗಿದೆ. ಇದರಿಂದ ನಾವು ಪ್ರಯೋಜನ ಪಡೆಯಬಹುದು. ವೈಯಕ್ತಿಕವಾಗಿ ಮತ್ತು ಸಾಮೂಹಿಕವಾಗಿ ಎರಡು ರೀತಿಗಳ ಲಾಭವೂ ಸಿಗುವುದು. ಜಮಾಅತ್ ವರ್ಧಿಸುವಾಗ ದುರೂದ್ ಓದುವವರ ಸಂಖ್ಯೆ ವರ್ಧಿಸುವಾಗ ವಿರೋಧಿಗಳ ಸಂಖ್ಯೆ ಕಡಿಮೆಯಾಗುತ್ತಾ ಹೋಗುವುದು.

ಇಲ್ಲಿ ಇನ್ನೊಂದು ವಿಷಯ ಹೇಳ ಬಯಸುತ್ತೇನೆ. ಕೆಲವರು ಪ್ರಶ್ನೆ ಕೇಳುತ್ತಾರೆ. 'ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್' ಎಂದು ಹೇಳಿದ ನಂತರ 'ಅಲ್ಲಾಹುಮ್ಮ ಬಾರಿಕ್ ಅಲಾ ಮುಹಮ್ಮದಿನ್' ಎಂದು ಬೇರೆ ಬೇರೆಯಾಗಿ ಏಕೆ ಹೇಳಬೇಕು ಎಂದು ಕೇಳುತ್ತಾರೆ. ಇದರ ಬಗ್ಗೆ ಸಂಕ್ಷಿಪ್ತವಾಗಿ ನಾನು ಹೇಳುವುದೇನೆಂದರೆ– 'ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್' ಎಂಬ ದುಆದಲ್ಲಿ ಅವರ ಶರೀಅತ್ ಜಯಗಳಿಸುವ ಬಗ್ಗೆ ಮತ್ತು ಯಾವಾಗಲೂ ಸ್ಥಿರವಾಗಿ ಉಳಿಯುವ ಬಗ್ಗೆ ಮತ್ತು ಮುಸ್ಲಿಮ್ ಸಮುದಾಯ ಅವರ ಶಿಫಾರಸಿನಿಂದ ಅನುಗ್ರಹ ಪಡೆಯುವ ಬಗ್ಗೆ ಪ್ರಾರ್ಥನೆ ಇದೆ. ಅದೇರೀತಿ 'ಅಲ್ಲಾಹುಮ್ಮ ಬಾರಿಕ್ ಅಲಾ ಮುಹಮ್ಮದಿನ್' ಎನ್ನುವುದರಲ್ಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗೌರವ, ಅವರ ಶ್ರೇಷ್ಠತೆ, ಭವ್ಯತೆ ಮತ್ತು ಹಿರಿಮೆ ಯಾವಾಗಲೂ ಸ್ಥಾಪಿತವಾಗಿರಲಿ ಎಂದು ಪ್ರಾರ್ಥನೆ ಮಾಡಲಾಗುತ್ತಿದೆ.

ಅಲ್ಲಾಹನು ನಮಗೆ ಸರಿಯಾದ ರೀತಿಯಲ್ಲಿ ದುರೂದ್ ಪ್ರಾರ್ಥನೆ ಮಾಡುವ ಭಾಗ್ಯ ನೀಡಲಿ. ನಾವು ಅವರ ಬಗ್ಗೆ ಹೊಂದಿದ ನೋವಿನ ಕಾರಣದಿಂದ ಅಲ್ಲಾಹನ ಸಾಮೀಪ್ಯ ಪಡೆಯುವವರಾಗುವ. ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಪ್ರೀತಿಯಲ್ಲಿ ಯಾವಾಗಲೂ ವೃದ್ಧಿ ಹೊಂದುವವರಾಗೋಣ. ಅವರ ಶರೀಅತನ್ನು ಹಬ್ಬಿಸಲು ನಮ್ಮ ಸಾಮರ್ಥ್ಯಗಳನ್ನು ಬಳಸುವವರಾಗೋಣ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳನ್ನು ಅನುಸರಿಸಿ ಲೋಕದಿಂದ ಅಶಾಂತಿ ಗಲಬೆಗೊಂದಲಗಳನ್ನು ಕೊನೆಗೊಳಿಸಲು ನಮ್ಮ ಕರ್ತವ್ಯಗಳನ್ನು ಈಡೇರಿಸುವವರಾಗೋಣ. ಅಲ್ಲಾಹನು ನಮಗೆ ಅದರ ಭಾಗ್ಯ ನೀಡಲಿ.

ಜುಮುಅ ನಮಾಝ್ ನಂತರ ಹಝ್ರತ್ ಖಲೀಫತುಲ್ ಮಸೀಹರು ಎರಡು ಜನಾಝ ಗಾಯಿಬ್ ನಮಾಝ್ ಅನುಷ್ಠಿಸಿದರು. ಮೊದಲನೆಯದು ಮೌಲವಿ ಅಬ್ದುಲ್ ಖಾದಿರ್ ಸಾಹೇಬ್ ದೆಹ್ಲವಿ ದರ್ವೇಶ್ ಖಾದಿಯಾನ್ ಅವರದಾಗಿದೆ. ಅವರು 2015 ಜನವರಿ 10ರಂದು ತನ್ನ 97ನೇ ವರ್ಷ ಪ್ರಾಯದಲ್ಲಿ ನಿಧನ ಹೊಂದಿದರು. إِنَّا لِلّٰهِ وَإِنَّا إِلَيْهِ رَاجِعُونَ . ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಅವರು ರೋಮಿನಲ್ಲಿ ಪೋಪರನ್ನು ಭೇಟಿಯಾಗಿ ಇಸ್ಲಾಮಿನ ಸಂದೇಶ ತಲಪಿಸಿದ್ದರು. ಈ ಘಟನೆ ಬಗ್ಗೆ 'ತಾರೀಖೆ ಅಹ್ಮದಿಯತ್' ಸಂಪುಟ ಹತ್ತರಲ್ಲಿ 'ಹಝ್ರತ್ ಖಲೀಫ ಸಾನೀಕೆ ಅಹ್‌ದ್‌ಮೇ ಪೋಪ್‌ಕೋ ತಬ್ಲೀಗೆ ಇಸ್ಲಾಮ್' ಎಂಬ ಶೀರ್ಷಿಕೆಯಲ್ಲಿ ವಿವರಿಸಲಾಗಿದೆ. ಅಲ್ಲಾಹನು ಅವರ ಸ್ಥಾನವನ್ನು ಉನ್ನತಗೊಳಿಸಲಿ. ದ್ವಿತೀಯ ಜನಾಝ ಮರ್‌ಹೂಮ್ ಬಶೀರ್ ಅಹ್ಮದ್ ಸಾಹೇಬ್ ಹಾಫಿಝಾಬಾದಿ ಅವರ ಪತ್ನಿ ಮುಬಾರಕ ಬೇಗಮರದು. ಅವರು 2015 ಜನವರಿ 3ರಂದು ತನ್ನ 83ನೇ ವಯಸ್ಸಿನಲ್ಲಿ ಮೃತರಾದರು. إِنَّا لِلّٰهِ وَإِنَّا إِلَيْهِ رَاجِعُونَ . ಅಲ್ಲಾಹನು ಇವರಿಬ್ಬರಿಗೂ ಉನ್ನತ ಪದವಿ ನೀಡಲಿ.

-------------*****-------------

*Friday Sermon delivered by Hadrath Khaleefatul Masih Al Khamis(atba)*
*at Masjid Baithul Futhuh, London on 16-01-2015.*
Summarized by *Majlis Ansarullah Bharat*
***Kannada Translation:*** M. Ubeidullah for Kannada Desk, Qadian
***Reviewed by:*** M P Ibrahim | ***Typing:*** U Basheer Ahmad
*Published By:* **Kannada Isha'at Team** for **Nazarath Nashr-O-Isha'ath, Qadian**
***Email***: *khutuba.kannada@gmail.com*